ಜಿಗಿಯುತ್ತಾ, ಗಡ್ಡೆಯಿಬ್ಬನಿಯ ಬೆಳಕಿನಲ್ಲಿ ದೇದೀಪ್ಯವಾಗಿ ಫಳಾರಿಸುತ್ತಿದ್ದ ಕಾಡು ಹುಲ್ಲಿನ ನಡುವೆ ಗುಡ್ಡ ಹತ್ತತೊಡಗುತ್ತವೆ.

'ಅವಳು ಒಂದು ದಿನ ಉಳಿದುಕೊಳ್ಳುವುದೇ ಆದಲ್ಲಿ?' ಕತ್ತೆತ್ತಿ ಚಂದ್ರನನ್ನು ದಿಟ್ಟಿಸುತ್ತಾ ಅಂದುಕೊಂಡ ಸ್ಟ್ರೆಶ್ನೆಫ್.

ಆ ನಿರ್ಜನ, ಆ ಅಸ್ಫುಟ ಬೆಳ್ಳಿ ಹುಲ್ಲುಮಾಳದ ಮೇಲೆ ನೇರಕ್ಕೆ ಚಂದ್ರ ತೂಗುತ್ತಿದ್ದ... ಓಹ್, ಶರತ್ಕಾಲದ ವಿಷಣ್ಣ ಸೊಬಗೇ!

ಕುದುರೆ ತನ್ನೆಲ್ಲಾ ಸತುವಿನೊಂದಿಗೆ ಕೆನೆಯುತ್ತಾ ತನ್ನೆದುರಿನ ಉದ್ದನೆಯ, ದಟ್ಟ ಕಾಡಿನತ್ತ ಹಳ್ಳಗಳ ನೀರಿನಿಂದ ಕೊಚ್ಚಿಹೋಗಿದ್ದ ಕಾಡು ಜಾಡುಗಳ ಕಡಿದಾದ ಕೊರಕಲುಗಳನ್ನು ಹತ್ತುವಾಗ, ಅದರ ಜೀನಿನ ತಡಿ ಕಮಾನು ಕಿರುಗುಡುತ್ತಿತ್ತು. ಆಗ ಅದು ಇದ್ದಕ್ಕಿದ್ದಂತೆ ಆಯ ತಪ್ಪಿ ತಿಟ್ಟೆಯ ತಿರುವಿನಲ್ಲಿ ಬಿದ್ದೇ ಬಿಟ್ಟಂತೆ ತಡವರಿಸಿತು. ಸಿಟ್ಟಿನಿಂದ ಕುದ್ದು ಹೋದ ಸ್ಟ್ರೆಶ್ನೆಫ್, ಕೈಯ್ಯಲ್ಲಿದ್ದ ಬಾರುಕೋಲಿನಿಂದ ಬಿರುಸಾಗಿ ಕುದುರೆಯ ಹಣೆಗೆ ಹೊಡೆದ.

'ಮುದಿ ನಾಯಿ!' ಅವನ ದುಃಖತಪ್ತ ಸಿಟ್ಟಿನ ಕೂಗು ಕಾಡಿನ ಮೇಲೆ ಅಪ್ಪಳಿಸಿತು.

ಕಾಡಿನಾಚೆಗೆ ಬತ್ತಲು ಬಯಲುಗಳು ಹಾಸಿಕೊಂಡಿದ್ದವು. ಪರ್ವತದ ತಡಿಯಲ್ಲಿ, ಕಾಡು ಗೋಧಿಯ ಕೂಳೆಗಳ ನಡುವೆ, ಕೆಲವು ಹೊರಮನೆಗಳು ಹಾಗೂ ಜಹಗೀರುದಾರನ ಹುಲ್ಲಿನ ಮಾಡಿನ ಮನೆಯಿದ್ದ ಬಡ ತೋಟವೊಂದಿತ್ತು. ಅದೆಷ್ಟು ಖಿನ್ನವಾಗಿ ಕಾಣುತ್ತಿತ್ತು ಆ ಚಂದ್ರನ ಬೆಳಕಲ್ಲಿ! ಸ್ಟ್ರೆಶ್ನೆಫ್ ಕುದುರೆಯನ್ನು ನಿಲ್ಲಿಸಿದ. ಆಗಲೇ ತುಂಬಾ ತಡವಾದಂತೆ ಕಾಣುತ್ತಿತ್ತು. ಅಲ್ಲಿ ಮೌನ ಮನೆ ಮಾಡಿತ್ತು. ಅನಂತರ ಅವನು ಕುದುರೆಯನ್ನು ಅಂಗಳಕ್ಕೆ ಹೊಡೆದ. ಮನೆ ಪೂರಾ ಕತ್ತಲಲ್ಲಿ ಮುಳುಗಿತ್ತು. ಸ್ಟ್ರೆಶ್ನೆಫ್ ಕುದುರೆಯ ಮೇಲಿಂದ ಕೆಳಕ್ಕೆ ಜಿಗಿದ. ಕುದುರೆ ಜೋಲು ಮುಖವನ್ನು ಇಳಿಬಿಟ್ಟುಕೊಂಡು ನಿಂತೇ ಇತ್ತು. ಅಂಗಳದಲ್ಲಿ ಮುದಿ ನಾಯಿಯೊಂದು ಕಾಲುಗಳೊಳಕ್ಕೆ ಮೂತಿ ಸೇರಿಸಿ ಸುರುಟಿಕೊಂಡು ಮಲಗಿತ್ತು. ಅದು ಕೊಂಚವೂ ಅಲುಗಾಡದೆ, ಕಣ್ಣಗಲಿಸಿ ನೋಡಿ, ಸ್ವಾಗತಿಸುವ ಧಾಟಿಯಲ್ಲಿ ನೆಲಕ್ಕೆ ಬಾಲ ಬಡಿಯತೊಡಗಿತು. ಸ್ಟ್ರೆಶ್ನೆಫ್ ಗುಟ್ಟಿನ ಬಾಗಿಲೊಂದರಿಂದ ಒಳ ಹೊಕ್ಕ. ಅದರ ಕಡೆಯಿಂದ ಕೊಳೆತ ವಾಸನೆಯೊಂದು ಮೂಗಿಗಡರುತ್ತಿತ್ತು. ಒಳಗೆ ನಡುಮನೆಯಲ್ಲಿ ಮಂದ ಬೆಳಕಿತ್ತು. ಹಿಮದ ಬೆವರಿನಿಂದ ಕಿಟಕಿಯ ಕಟ್ಟುಗಳು ಚಿನ್ನದ ಲೇಪನದಂತೆ ಹೊಳೆಯುತ್ತಿದ್ದವು. ತೆಳುವಾದ, ಮೆತ್ತನೆಯ ಸಡಿಲ ಉಡುಪು ತೊಟ್ಟಿದ್ದ ಪುಟ್ಟ ಹೆಂಗಸೊಬ್ಬಳು ಕತ್ತಲ ಚಾವಡಿಯ ದಾರಿಯಿಂದ ಸದ್ದಾಗದಂತೆ ಹೆಜ್ಜೆಗಳನ್ನಿಟ್ಟು ಓಡಿ ಬಂದಳು. ಸ್ಟ್ರೆಶ್ನೆಫ್ ಅವಳತ್ತ ಬಾಗಿದ. ಅವಳು ತನ್ನ ಬೆತ್ತಲೆ ಕೈಗಳಿಂದ ಅವನ ತೆಳ್ಳನೆಯ ಕುತ್ತಿಗೆಯನ್ನು ಚಕ್ಕನೆ ಬಳಸಿ ಅಪ್ಪಿ ಹಿಡಿದು, ಖುಷಿಯ ಅಳು ಅಳುತ್ತಾ, ಮೆಲ್ಲನೆ ಅವನ ಕಚ್ಚಾ ಕೋಟಿನ ಮೇಲೆ ಮುಖವೊತ್ತಿದಳು. ಮಗುವೊಂದರ ಎದೆಬಡಿತದಂತೆ ಅವನಿಗೆ ಅವಳ ಎದೆ ಬಡಿತ ಸ್ಪಷ್ಟವಾಗಿ ಕೇಳುತ್ತಿತ್ತು. ಅವಳ ಎದೆಯ ಮೇಲಿದ್ದ, ಅವಳ ಅಜ್ಜಿ ಕೊಟ್ಟಿದ್ದ ಮತ್ತು ಅವಳದಾಗಿ ಉಳಿದಿದ್ದ ಅವಳ ಏಕೈಕ ಆಸ್ತಿ, ಚಿನ್ನದ ಶಿಲುಬೆಯ ಸ್ಪರ್ಶಾನುಭವ ಅವನಿಗಾಗುತ್ತಿತ್ತು.

'ನೀನು ನಾಳೆಯವರೆಗೂ ಇಲ್ಲಿರುತ್ತೀಯಾ?' ಪಿಸುದನಿಯಲ್ಲಿ ಅವಳು ಉಸುರಿದಳು. 'ನೀನು ಇರ್ತೀಯಾ? ಇದನ್ನು ನಂಬೋದೇ ಎಂಥಾ ಖುಷಿಯ ಸಂಗತಿ!'

'ವಿಯರ, ನಾನೀಗ ಹೋಗಿ ಕುದುರೆಯನ್ನ ದೂರ ಕಟ್ಟಿ ಬರ್ತೀನಿ' ಅನ್ನುತ್ತಾ ಸ್ಟ್ರೆಶ್ನೆಫ್ ಅವಳಿಂದ ಬಿಡಿಸಿಕೊಂಡ. 'ನಾಳೆಯವರೆಗೆ, ನಾಳೆಯವರೆಗೆ' ಅಂತ ಪುರುಚ್ಚರಿಸಿದ ಅವನು, 'ದೇವರೇ ದಿನದಿಂದ ದಿನಕ್ಕೆ ಇವಳು ಭಾವಪರವಶಳಾಗುತ್ತಿರುವ ಪರಿಯೇ! ಇವಳ ಸಿಗರೇಟಿನ ಹುಚ್ಚೇ! ಅಬ್ಬಾ, ಹದ್ದುಮೀರಿದ ಇವಳ ಸ್ಪರ್ಶದ ಆಳವೇ!' ಕೆಲ ಕ್ಷಣದ ಬಳಿಕ ಅಂದುಕೊಳ್ಳುತ್ತಾನೆ.